O.S.No.199/2012 P W - 1

ದಿನಾಂಕ 06.12.2024 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ.C.M.J. ವಕೀಲರಿಂದ ಃ

ನಮ್ಮ ತಾತನ ಸ್ವತ್ತಿನಲ್ಲಿ ಭಾಗ ಬರಬೇಕೆಂದು ದಾವೆ ಹಾಕಿದ್ದೇವೆ. ನನ್ನ ತಂದೆಯ ಹೆಸರು ಚೌಡೇಗೌಡ ಉ. ಗೂನೇಗೌಡ. ನನ್ನ ಮದುವೆಯಾಗಿ ಅಂದಾಜು 40-45 ವರ್ಷವಾಗಿರಬಹುದು. ನನ್ನ ಮದುವೆ ಸಂದರ್ಬದಲ್ಲಿ ನನ್ನ ತಂದೆ ಜೀವಂತವಾಗಿದ್ದರು. ನನ್ನ ಹಾಗೂ 1 ನೇ ವಾದಿ ಮತ್ತು 3 ನೇ ಪ್ರತಿವಾದಿಯವರ ವಿವಾಹವನ್ನು ನನ್ನ ತಂದೆ ಹಾಗೂ 1 ಮತ್ತು 2 ನೇ ಪ್ರತಿವಾದಿಯವರು ನೆರವೇರಿಸಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಮ್ಮ ತಂದೆಗೆ ವ್ಯವಸಾಯ ಬಿಟ್ಟು ಬೇರೆ ಆದಾಯ ಇರಲಿಲ್ಲ ಎಂದರೆ ಸರಿ. ನಿಮ್ಮ ತಂದೆಯವರು ಸಾಲ ಮಾಡಿ ನಿಮ್ಮ ವಿವಾಹವನ್ನು ಮಾಡಿದ್ದರು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಮ್ಮ ತಂದೆ ಯಾವಾಗ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ನಮ್ಮ ತಂದೆಯವರ ಮರಣಾನಂತರ 1 ಮತ್ತು 2 ನೇ ಪ್ರತಿವಾದಿಯರೇ ಮನೆಯ ಖರ್ಚು ವೆಚ್ಚ ನೋಡಿಕೊಂಡು ಬರುತ್ತಿದ್ದರು ಎಂದರೆ ಸರಿ. 1 ಮತ್ತು 2 ನೇ ಪ್ರತಿವಾದಿಯರಿಗೂ ಮಕ್ಕಳಿದ್ದಾರೆ ಎಂದರೆ ಸರಿ. ನಮ್ಮ ವಿವಾಹದಲ್ಲಿ ನಮ್ಮ ತಂದೆ ಮಾಡಿದ್ದ ಸಾಲವನ್ನು 1 ಮತ್ತು 2 ನೇ ಪ್ರತಿವಾದಿ ತೀರಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆಸಿರುವ ಅಂಶಗಳ ಬಗ್ಗೆ ನನಗೆ ಗೊತ್ತಿಲ್ಲ. ದಾವೆ ದಾಖಲಿಸಲು ಮಾಹಿತಿಯನ್ನು ನಾನೇ ನೀಡಿದ್ದೇನೆ. ದಾವಾ ಸ್ವತ್ತುಗಳು ಮೂಲತಃ ಚಿಕ್ಕ ಕಾಳೇಗೌಡರವರಿಗೆ ಸೇರಿದ್ದು ಎಂದು ಬರೆಸಿದ್ದೇನೆ ಎಂದರೆ ಸರಿ. ಸದರಿಯವರು ದಾವಾ ಸ್ವತ್ತುಗಳನ್ನು ನೋಂದಾಯಿತ ಕ್ರಯದ ಮೂಲಕ ಖರೀದಿಸಿದ್ದರು ಎಂದು ಹೇಳಿದ್ದೇನೆ ಎಂದರೆ ಸರಿ. ಚಿಕ್ಕ ಕಾಳೇಗೌಡರವರು ಯಾರಿಂದ ಕ್ರಯಕ್ಕೆ ಪಡೆದಿದ್ದರು ಎಂದು ನನಗೆ ಗೊತ್ತಿಲ್ಲ. ಚಿಕ್ಕ ಕಾಳೇಗೌಡರಿಗೆ ತಿಳುವಳಿಕೆ ಇಲ್ಲದ ಕಾರಣ ಅವಿದ್ಯಾವಂತರಾದ ಕಾರಣ ಖಾತೆ ಅವರ ಹೆಸರಿಗೆ ಮಾಡಿಸಿಕೊಂಡಿಲ್ಲ ಎಂದು ಹೇಳಿದ್ದೇನೆ ಎಂದರೆ ಸರಿ. ಆದ್ದರಿಂದ ಸ್ವತ್ತುಗಳ ಖಾತೆ ಅವರ

ಮಾರಾಟಗಾರರ ಹೆಸರಿನಲ್ಲಿ ಇತ್ತು ಎಂದು ಹೇಳಿದ್ದೇನೆ ಎಂದರೆ ಸರಿ. ಚಿಕ್ಕ ಕಾಳೇಗೌಡರ ಮರಣಾನಂತರ ಅವರ ಮಕ್ಕಳಾದ ಚೌಡೇಗೌಡ ಮತ್ತು ಕಾಳಮರಿಗೌಡ ದಾವಾ ಸ್ವತ್ತನ್ನು ವಿಭಾಗ ಮಾಡಿಕೊಂಡಿದ್ದಾರೆ ಎಂದು ಹೇಳಿದ್ದೇನೆ ಎಂದರೆ ಸರಿ. ನಾನು ವಿಭಾಗ ಪಟ್ಟಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ , ಅದರ ಬಗ್ಗೆ ನನಗೆ ಗೊತ್ತಿಲ್ಲ. ಚಿಕ್ಕ ಕಾಳೇಗೌಡರವರ ಹೆಸರಿನಲ್ಲಿ ಖಾತೆ ಇಲ್ಲದೆ ಚೌಡೇಗೌಡ ಮತ್ತು ಕಾಳಮರಿಗೌಡ ಹೇಗೆ ಭಾಗ ಮಾಡಿಕೊಂಡರು ಎಂದರೆ ಸಾಕ್ಷಿ ನಂತರ ಖಾತೆ ಮಾಡಿಕೊಂಡಿರಬಹುದು ಎಂದು ನುಡಿಯುತ್ತಾರೆ. ವಿಭಾಗದ ನಂತರವೂ ಸಹ ಖಾತೆ ಚೌಡೇಗೌಡರ ಹೆಸರಿಗೆ ಆಗಿಲ್ಲ ಎಂದು ಹೇಳಿ ಬರೆಸಿದ್ದೇನೆ ಎಂದರೆ ಸರಿ. ಚೌಡೇಗೌಡರ ಮರಣಾನಂತರ ಖಾತೆ 1 ಮತ್ತು 2 ನೇ ಪ್ರತಿವಾದಿಯ ಹೆಸರಿಗೆ ಖಾತೆ ಆಗಿದೆ ಎಂದು ನಾನು ಹೇಳಿಲ್ಲ.

ನಾನು ಕನಕಪುರದ ಹಲಸಿನಮರದ ದೊಡ್ಡಿಯಲ್ಲಿ ವಾಸವಿದ್ದೇನೆ. 1 ನೇ ವಾದಿ ದ್ಯಾಪೇಗೌಡನದೊಡ್ಡಿಯಲ್ಲಿ ವಾಸವಿದ್ದೇನೆ ಎಂದರೆ ಸರಿ. 3 ನೇ ಪ್ರತಿವಾದಿ ಗೇರಹಳ್ಳಿಯ ವಾಸಿ ಎಂದರೆ ಸರಿ. ಮದುವೆಯ ನಂತರ ನಾವು ಗಂಡನ ಮನೆಯಲ್ಲಿ ವಾಸವಾಗಿದ್ದೇವೆ ಎಂದರೆ ಸರಿ. ದಾವಾ ಸ್ವತ್ತನ್ನು 1 ಮತ್ತು 2 ನೇ ಪ್ರತಿವಾದಿಯರು ವ್ಯವಸಾಯ ಮಾಡಿಕೊಂಡಿದ್ದಾರೆ ಆದರೆ ಅದು ಒಟ್ಟು ಕುಟುಂಬದ ಸ್ವತ್ತಾಗಿದೆ. ದಾವಾ ಸ್ವತ್ತು ಕನಕಪುರ ಕಸಬಾ, ಕನಕಪುರ ಗ್ರಾಮಕ್ಕೆ ಸೇರಿದ ಸ್ವತ್ತುಗಳು ಎಂದರೆ ಸರಿ. ಮಳಗಾಳಿನಿಂದ ಚೀರನಕುಪ್ಪೆಗೆ ಹೋಗುವ ಮುಖ್ಯ ರಸ್ತೆಯಲ್ಲಿ ಸ್ವತ್ತುಗಳಿವೆ ಎಂದರೆ ಸರಿ. ದಾವಾ ಸ್ವತ್ತುಗಳ ಬೆಲೆ 1 ಗುಂಟೆಗೆ 2 ಲಕ್ಷ ಇರಬಹುದಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1 ಗುಂಟೆಗೆ 15-16 ಲಕ್ಷ ಮೌಲ್ಯ ಇದೆ ಎಂದರೆ ಸರಿ. ಸರ್ವೆ ನಂ. 102 ರಲ್ಲಿ 1 ಮತ್ತು 2 ನೇ ಪ್ರತಿವಾದಿಯರು ಭಾಗ ಮಾಡಿಕೊಂಡು ತಲಾ ಒಬ್ಬೊಬ್ಬರಿಗೂ 37 ಗುಂಟೆ ಖಾತೆ ಆಗಿದೆ ಎಂದರೆ ಖಾತೆ ಆಗಿಲ್ಲ ಎಂದು ನುಡಿಯುತ್ತಾರೆ. ಮುಂದುವರೆದು ಸಾಕ್ಷಿ 1 ಮತ್ತು 2 ನೇ ಪ್ರತಿವಾದಿಯರ ಹೆಸರಿಗೆ 37 ಗುಂಟೆ ಹೋಗಿದೆ ಎಂದು ನುಡಿಯುತ್ತಾರೆ. ನಿಪಿ-3 ರ ದಾಖಲೆಯನ್ನು ನಾನೇ ನ್ಯಾಯಾಲಯಕ್ಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ. ನಂ. 2 ರಲ್ಲಿ ಎಷ್ಟು ಗುಂಟೆ ಇದೆ ಎಂದು ನನಗೆ ಗೊತ್ತಿಲ್ಲ, ನನಗೆ ಓದಲು ಬರುವುದಿಲ್ಲ. ನಿಪಿ-7 ರಂತೆ ದಾವಾ ಐಟಂ. ನಂ. 2 ರಲ್ಲಿ 6 ಮುಕ್ಕಾಲು ಗುಂಟೆ ಇದೆ ಎಂದರೆ ವಕೀಲರಿಗೆ ನೀಡಿದ್ದೇನೆ ಎಂದು ಮಾತ್ರ ನುಡಿಯುತ್ತಾರೆ. ಸದರಿ ಸ್ವತ್ತು ಚಿಕ್ಕ ಕಾಳೇಗೌಡರ

ಹೆಸರಿನಲ್ಲಿದೆ. ದಾವಾ ಸ್ವತ್ತುಗಳು ಚಿಕ್ಕ ಕಾಳೇಗೌಡರ ಹೆಸರಿನಲ್ಲೇ ಇದೆ. ದಾವಾ ಐಟಂ. ನಂ. 7 ರಲ್ಲಿ ಸರ್ವೆ ನಂ. 125/2 ರಲ್ಲಿ 34 ವರೆ ಗುಂಟೆಯಲ್ಲಿ ಭಾಗ ಬರಬೇಕೆಂದು ದಾವೆ ಹಾಕಿದ್ದೇನೆ ಎಂದರೆ ಸರಿ. ನಿಪಿ-20 ರ ಂತೆ ಸದರಿ ಸ್ವತ್ತಿನ ಖಾತೆ ಚೌಡೇಗೌಡ ಉ. ಗೂಸಲೇಗೌಡ, ಮೊಳ್ಳೆ ಚೌಡೇಗೌಡ ಬಿನ್ ಚೌಡೇಗೌಡರ ಹೆಸರಿನಲ್ಲಿ ಜಂಟಿ ಖಾತೆ ಇದೆ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮೊಳ್ಳೆ ಚೌಡೇಗೌಡ ಬಿನ್ ಚೌಡೇಗೌಡ ತೀರಿಕೊಂಡಿರುತ್ತಾರೆ ಎಂದರೆ ಸರಿ. ಅವರ ಮರಣಾನಂತರ ಸದರಿ ಸ್ವತ್ತಿನ ಖಾತೆ ಅವರ ವಾರಸುದಾರರ ು ಹಾಗೂ ಚೌಡೇಗೌಡ ಉ. ಗೂಸಲೇಗೌಡ ರ ಹೆಸರಿನಲ್ಲಿ ಜಂಟಿ ಖಾತೆ ಬರುತ್ತಿದೆ ಎಂದರೆ ಗೊತ್ತಿಲ್ಲ. ನೀವು ಈ ದಾವೆಯಲ್ಲಿ ಮೊಳ್ಳೆ ಚೌಡೇಗೌಡ ಬಿನ್ ಚೌಡೇಗೌಡರ ವಾರಸುದಾರರನ್ನು ಪಾಟೀ ಮಾಡಿಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಸರ್ವೆ ನಂ. 96/4 ರಲ್ಲಿ 5 ಗುಂಟೆಗೆ ದಾವೆ ಹಾಕಿಲ್ಲ. ನಿಪಿ-22 ರಲ್ಲಿನ ಸ್ವತ್ತನ್ನು ಈ ದಾವೆಯಲ್ಲಿ ಸೇರಿಸಿದ್ದೇವೆ. ನಿಪಿ-22 ರಲ್ಲಿರುವ ಹೊನ್ನಮ್ಮ, ಕಾಳೇಗೌಡ , ಚೌಡೇಗೌಡರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

ದಾವಾ ಸ್ವತ್ತುಗಳು ಪಿತ್ರಾರ್ಜಿತ ಹಾಗೂ ಒಟ್ಟು ಕುಟುಂಬದ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ಐಟಂ. ನಂ. 5 ರ 123/3 ರಲ್ಲಿ 11 ಮುಕ್ಕಾಲು ಗುಂಟೆ ಗೆ ಭಾಗ ಬರಬೇಕೆಂದು ದಾವೆ ಹಾಕಿದ್ದೇನೆ ಎಂದರೆ ಸರಿ. ನಿಪಿ-16 ರಲ್ಲಿ ಸದರಿ ಸ್ವತ್ತಿನಲ್ಲಿ 11 ಮುಕ್ಕಾಲು ಗುಂಟೆ ಇಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ್ ಹಾಗೂ ವಿಸ್ತೀರ್ಣ ವನ್ನು ತಾಳೆಯಾಗದ ದಾಖಲೆಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದೇನೆ ಎಂದರೆ ಸರಿ. ನನಗೆ ದಾವಾ ಸ್ವತ್ತುಗಳಲ್ಲಿ ಯಾವುದೇ ಭಾಗ ಬರುವುದಿಲ್ಲ, ನಾನು ಸುಳ್ಳು ದಾವೆ ಹ ಾಕಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಮುಗಿಯಿತು.</u>**

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಓ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ